"ನಾನು ಹೇಳುತ್ತಿರುವುದು ಕೇಳಿಸುತ್ತಿಲ್ಲವೇನು? ಏ... ಕರಿ ಹಂದಿ."

ನಿಧಾನವಾಗಿ ಉದ್ದೇಶಪೂರ್ವಕವಾಗಿಯೇ ಕಾರ್ಲಿ ಸಿಗರೇಟನ್ನು ಸೇದುತ್ತಿದ್ದ. ಈಗ ಅವನ ಪರೀಕ್ಷೆಯ ಸಮಯ. ಅವರಿಬ್ಬರೂ ಪರಸ್ಪರ ದಿಟ್ಟಿಸಿ ನೋಡಿದರು, ಕಣ್ಣುಗಳ ಮೂಲಕವೇ ಸವಾಲನ್ನು ಎಸೆದರು. ಇಬ್ಬರು ಬಾಕ್ಸರುಗಳಂತೆ, ಇಬ್ಬರೂ ಶಕ್ತಿ ಪ್ರದರ್ಶನ ಮಾಡಲೇ ಬೇಕು. ಆದರೆ, ಮೊದಲು ಯಾರು ಎಂಬುದನ್ನು ತಿಳಿದುಕೊಂಡು.

"ನಿನ್ನಂತಹವನನ್ನು ಮುಟ್ಟಿ ನಾನು ಕೈಕೊಳೆ ಮಾಡಿಕೊಳ್ಳಲೇ?"

ಕಾರ್ಲಿ ಯಾವ ಮಾತನ್ನೂ ಆಡಲಿಲ್ಲ. ಏನನ್ನಾದರೂ ಹೇಳಿದರೆ ಮೌನ ಮುರಿದಂತೆ. ತಾನು ನಿಧಾನವಾಗಿ ಸಾಧಿಸಿದ್ದ ಮೇಲುಗೈ ಬಗ್ಗೆ ಹೆಮ್ಮೆಪಟ್ಟ. ಕಸಿವಿಸಿ ಪಡುವಂತಹ ಮೌನ. ಆಗ, "ನಿನ್ನಂತಹ ಅನಾಗರಿಕನನ್ನು ಮುಟ್ಟುವ ಬದಲು ನಾನು ಪೊಲೀಸರನ್ನು ಕರೆಯುತ್ತೇನೆ. ಒಬ್ಬ ಬಿಳಿಯ ಮಾತನಾಡಿದರೂ ಸಹ ನೀನು ನಿನ್ನ ಕರಿ ಬಾಯಿಯನ್ನು ಬಿಡುತ್ತಿಲ್ಲ" ಎಂದು ದಬಾಯಿಸಿದ.

ಕಾರ್ಲಿಗೆ ದೌರ್ಬಲ್ಯ ಅರ್ಥವಾಯಿತು. ಆ ಬಿಳಿಯ ತಾನೇ ಕ್ರಮ ಕೈಗೊಳ್ಳುವಷ್ಟು ಧೈರ್ಯ ಹೊಂದಿರಲಿಲ್ಲ. ಹಾಗಾಗಿ ಕಾರ್ಲಿ, ಈ ಬೆಂಚಿನ ವಿವಾದದ ಮೊದಲ ಸುತ್ತಿನಲ್ಲಿ ಜಯ ಗಳಿಸಿದ್ದ.

ಈಗ ಅವರ ಸುತ್ತ ಒಂದು ಗುಂಪು ಸೇರಿತು. ಓರ್ವ ತಮಾಷೆಗೆ ಆಫ್ರಿಕಾ ಎಂದು ಕೂಗಿದ. ಕಾರ್ಲಿ ಅದನ್ನು ಕಡೆಗಣಿಸಿದ. ಮತ್ತೆ ಜನ ಸೇರತೊಡಗಿದರು, ಓರ್ವ ಕರಿಯ ಬಿಳಿಯರ ಬೆಂಚಿನ ಮೇಲೆ ಕುಳಿತಿದ್ದ ಅಪೂರ್ವ ದೃಶ್ಯವೊಂದನ್ನು ನೋಡಲು. ಕಾರ್ಲಿ ತನ್ನ ಪಾಡಿಗೆ ತಾನು ಸಿಗರೇಟು ಎಳೆಯುತ್ತಿದ್ದ.

"ನೋಡಿ, ಆ ಕರಿ ಮಂಗನ ಧಿಮಾಕನ್ನು! ಈ ಕರಿಯ ಕಾಫೀರರ ಅತಿಯಾದ ಕೊಬ್ಬು!"

"ನನಗೆ ಅದು ಅರ್ಥ ಆಗುತ್ತಿಲ್ಲ, ಅವರಿಗೆ ಅವರದ್ದೇ ಆದ ಬೆಂಚುಗಳಿವೆ."

"ಏಳಬೇಡ, ನಿನಗೆ ಅಲ್ಲಿ ಕುಳಿತುಕೊಳ್ಳಲು ಎಲ್ಲಾ ತರಹದ ಹಕ್ಕುಗಳಿವೆ."

"ಪೊಲೀಸರು ಬರಲಿ, ಆಗ ಗೊತ್ತಾಗುತ್ತೆ."

"ನೋಡಿ ನನಗೆ ಅರ್ಥವಾಗುತ್ತಿಲ್ಲ, ಅವರು ತಮಗಿಷ್ಟ ಬಂದ ಕಡೆ ಏಕೆ ಕುಳಿತುಕೊಳ್ಳಬಾರದು" ಮತ್ತೊಂದು ಧ್ವನಿ ಕೇಳಿಸಿತು.

"ನಾನು ಆಗಲೆ ಹೇಳಿದ ಹಾಗೆ ನನ್ನ ಬಳಿ ಇಲ್ಲಿಯವನೊಬ್ಬ ಕೆಲಸದವನಿದ್ದ, ಅವನು ಹಾಗೇ ಅತಿಯಾದ ತರಲೆ..."

ಕಾರ್ಲಿ ಏನನ್ನೂ ಕೇಳಿಸಿಕೊಳ್ಳದೆ ಹಾಗೇ ಕುಳಿತಿದ್ದ. ಅನಿಶ್ಚಿತ ಮನಸ್ಸು ಈಗ ದೃಢ ನಿರ್ಧಾರಕ್ಕೆ ಬದಲಾಗಿತ್ತು. ಯಾವುದೇ ಷರತ್ತಿಗೂ ಅವನು ಎದ್ದೇಳುವಂತಹವನಾಗಿರಲಿಲ್ಲ. ಅವರೇನಾದರೂ ಮಾಡಿಕೊಳ್ಳಲಿ.

"ಓ, ಇವನೋ... ಏ, ಎದ್ದೇಳು ಗೊತ್ತಾಗಲ್ಲವ. ನಿನಗೆ ಓದಕ್ಕೆ ಬರಲ್ವ?" ಪೊಲೀಸನು ಅವನ ಮೇಲೆ ಅತಿಕ್ರಮಿಸುತ್ತ ಹೇಳಿದ. ಅವನ ಶರ್ಟಿನ ಗುಂಡಿಗಳ ಮಧ್ಯೆ ಇದ್ದ ಸಂಕೇತ ಹಾಗೂ ಅವನ ಬೆನ್ನಿನ ಗೆರೆಗಳು ಕಾಣಿಸಿದವು.

"ಏನು ನಿನ್ನ ಹೆಸರು, ವಿಳಾಸ?"

ಕಾರ್ಲಿ ತನ್ನ ಹಟಮಾರಿ ಮೌನವನ್ನೇ ಮುಂದುವರಿಸಿದ್ದ. ಅದರಿಂದ ಪೊಲೀಸ್ ಹೆಚ್ಚು ಕೋಪಿಷ್ಟನಾದ. ಪ್ರತಿ ನಿಮಿಷವೂ ಗುಂಪು ಹೆಚ್ಚಾಗ ತೊಡಗಿತು.

"ಇವನಿಗೆ ಈ ಧಾಟಿಯಲ್ಲಿ ಮಾತನಾಡುವ ಹಕ್ಕು ನಿಮಗಿಲ್ಲ" ಬಿಳಿಯ ಹೆಂಗಸು ಜೋರು ಮಾಡುತ್ತಾ ಹೇಳಿದಳು.

